

ಅಥವಾ ಅದ್ದೂರಿ ವಿನ್ಯಾಸದ ಸೀರೆಗಳಿಗೆ ಸರಳ ವಿನ್ಯಾಸದ, ಸೀರೆಯ ವಿರುದ್ಧ ಬಣ್ಣದ (ಕಾಂಟ್ರಾಸ್ಟ್ ಕಲರ್) ಲಾಂಗ್ ಜಾಕೆಟ್‌ಗಳು ಆಕರ್ಷಕವಾಗಿ ಕಾಣುತ್ತವೆ.

ಲಾಂಗ್ ಜಾಕೆಟ್ ಧರಿಸಲು ವಯಸ್ಸಿನ ಹಂಗಿಲ್ಲ. 18ರಿಂದ 45 ವರ್ಷದೊಳಗಿನ ಎಲ್ಲ ಮಹಿಳೆಯರೂ ತೊಡಬಹುದು, ಸಪೂರ ದೇಹದ, ಎತ್ತರ ನಿಲುವಿನ ಮಹಿಳೆಯರಿಗೆ ಇದು ಹೆಚ್ಚು ಸೂಟ್ ಆಗುತ್ತದೆ. ಗೆಟ್ ಟುಗೆದರ್ ಪಾರ್ಟಿ, ಕಚೇರಿ ಸಮಾರಂಭಗಳಿಗೆ ತೊಟ್ಟರೆ ರಿಚ್ ಲುಕ್ ಇರುತ್ತದೆ. ಸೀರೆಯ ಜೊತೆಗೆ ಜಾಕೆಟ್ ಧರಿಸಿದರೆ ಡಿಸೈನರ್ ಸೀರೆ ಹಾಗೂ ಬ್ಲೌಸ್‌ಗಳು ಮುಚ್ಚಿ ಹೋಗುತ್ತವೆ. ಇದರಿಂದ ಸೀರೆಯ ಅಂದ ಕೆಡುತ್ತದೆ. ಆದರೆ ಸೀರೆಯ ಅಂದ ಕೆಡದಂತೆ, ಸೀರೆಯ ಬಣ್ಣಕ್ಕೆ ಹೊಂದುವಂತಹ ಕಾಟನ್ ಹಾಗೂ ಸಿಂಥೆಟಿಕ್ ಲಾಂಗ್ ಜಾಕೆಟ್‌ಗಳೂ ಮಾರುಕಟ್ಟೆಯಲ್ಲಿ ಲಭ್ಯ.

ಮದುವೆ ಹಾಗೂ ಶುಭ ಸಮಾರಂಭಗಳಲ್ಲಿ ಮಹಿಳೆಯರು ರೇಷ್ಮೆ, ಬನಾರಸ್ ಸೀರೆಗಳನ್ನು ಧರಿಸುತ್ತಾರೆ. ಇಂತಹ ಸೀರೆಗಳಿಗೂ ಮ್ಯಾಚ್ ಆಗುವ ರೀತಿಯಲ್ಲಿ ರೇಷ್ಮೆ ಹಾಗೂ ಬನಾರಸ್ ಬಟ್ಟೆಗಳು ಹಾಗೂ ಬ್ರೊಕೇಡ್ ಬಟ್ಟೆಗಳು, ಗ್ರ್ಯಾಂಡ್ ಲುಕ್ ನೀಡುವ ವೆರೈಟಿ ಬಟ್ಟೆಗಳಲ್ಲಿ ವಿವಿಧ ವಿನ್ಯಾಸದ ಲಾಂಗ್ ಸೀರೆ ಜಾಕೆಟ್‌ಗಳು ಲಭ್ಯ. ನೀವು ಧರಿಸುವ ಸೀರೆ ತುಂಬಾ ಪ್ಲೇನ್ ಇದ್ದು, ಸಮಾರಂಭಕ್ಕೆ ಗ್ರ್ಯಾಂಡ್ ಲುಕ್ ನೀಡದು ಎನಿಸಿದರೆ ಯೋಚಿಸುವ ಅವಶ್ಯಕತೆಯೇ ಇಲ್ಲ. ಅದೇ ಪ್ಲೇನ್ ಸೀರೆಗೆ ಮ್ಯಾಚ್ ಆಗುವ ಗ್ರ್ಯಾಂಡ್ ಲುಕ್ ನೀಡುವ ರೇಷ್ಮೆಯ ಲಾಂಗ್ ಜಾಕೆಟ್ ಧರಿಸಿದರೆ ಸಾಕು ನಿಮ್ಮ ಲುಕ್ ಬದಲಾಗುತ್ತದೆ.

ಸೀರೆ ತುಂಬಾ ಗ್ರ್ಯಾಂಡ್ ಎನಿಸಿದರೆ ಅದರ ಮೇಲೆ ಅದಕ್ಕೆ ಮ್ಯಾಚ್ ಆಗುವ ಪ್ಲೇನ್ ಜಾಕೆಟ್ ಧರಿಸಿದರೆ ಸಾಕು. ಹೀಗೆ ಮಿಕ್ಸ್ ಅ್ಯಂಡ್ ಮ್ಯಾಚ್ ಮಾಡಿ ಈ ಜಾಕೆಟ್‌ಗಳನ್ನು ಸೀರೆಯ ಜೊತೆ ಧರಿಸಬಹುದು. ನೈಟ್ ಪಾರ್ಟಿಗಳಲ್ಲಿ ಸೀರೆ ಧರಿಸಿಕೊಂಡು ಹೋಗುವವರಿಗೂ ಸೀರೆಯ ಮೇಲೆ ಧರಿಸಲು ಸಾಕಷ್ಟು ಸುಂದರವಾದ ಡೆನಿಮ್ ಜಾಕೆಟ್‌ಗಳು ಲಭ್ಯವಿವೆ. ಇವು ಟ್ರೆಂಡಿ ಹಾಗೂ ಸ್ಟೈಲಿಷ್ ಲುಕ್ ನೀಡುವುದರ ಜೊತೆಗೆ ದೇಹವನ್ನು ಚಳಿಯಿಂದ ರಕ್ಷಿಸುತ್ತದೆ. ಇದರಿಂದ ಸೀರೆಯ ಅಂದವೂ ಇಮ್ಮಡಿಯಾಗುತ್ತದೆ. ಇಂತಹ ಲಾಂಗ್ ಜಾಕೆಟ್ ತೊಟ್ಟಾಗ ಆಭರಣದ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಇಷ್ಟವಿದ್ದರೆ ಇಯರ್ ರಿಂಗ್ ಅಥವಾ ಹ್ಯಾಂಗಿಂಗ್ಸ್ ಹಾಕಿಕೊಳ್ಳಬಹುದು. ಇಲ್ಲದಿದ್ದರೆ ಕೂದಲು ಇಳಿಬಿಟ್ಟರಾಯಿತು. ಆದರೆ ಹೈಹೀಲ್ ಚಪ್ಪಲಿ ಧರಿಸುವುದು ಅವಶ್ಯಕ. ■

## ಈ ಟಿಪ್ಸ್ ಪಾಲಿಸಿ

- ಸೀರೆಯ ಮೇಲೆ ಧರಿಸುವ ಜಾಕೆಟ್ ಸೀರೆಯ ಬಣ್ಣಕ್ಕೆ ಮ್ಯಾಚ್ ಆಗದೇ ಡಿಫರೆಂಟ್ ಆಗಿರಬೇಕು. ಆಗಷ್ಟೇ ಜಾಕೆಟ್‌ನ ಡಿಸೈನ್ ಹೈಲೈಟ್ ಆಗುವುದು.
- ಸೀರೆ ಜೊತೆ ಜಾಕೆಟ್ ಧರಿಸುವಾಗ ಸಿಂಪಲ್ಲಾದ ಆಭರಣಗಳನ್ನು ಬಳಸಿ.
- ಸೀರೆಯ ಸೆರಗನ್ನು ಕತ್ತಿನ ಸುತ್ತಲೂ ಸುತ್ತಿ ಕೆಳಗೆ ಬಿಟ್ಟರೆ ಸ್ಟೈಲಿಷ್ ಹಾಗೂ ಟ್ರೆಂಡಿಯಾಗಿ ಕಾಣುತ್ತದೆ.
- ಪ್ಲೇನ್ ಸೀರೆಗಳ ಮೇಲೆ ಬರೀ ಲಾಂಗ್ ಜಾಕೆಟ್ ಮಾತ್ರವಲ್ಲ – ಕಾಲರ್ ನೆಕ್, ರಾಯಲ್ ಲುಕ್‌ನ ರ್‍ಯಾಂಪ್ ಜಾಕೆಟ್, ಕುಂದನ್ ಹಾಗೂ ಹರಳುಗಳಿಂದ ಕೂಡಿದ ಫುಲ್ ಸ್ಲೀವ್ ಜಾಕೆಟ್‌ಗಳನ್ನೂ ಧರಿಸಬಹುದು.